ಕರ್ನಾಟಕ ವಿಧಾನಸಭೆ

ಗುರುವಾರ 29ನೇ ಮಾರ್ಚ್ 2001ರಂದು

ಸದನವು ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು : ಶ್ರೀ ಎಂ.ವಿ. ವೆಂಕಟಪ್ಪನವರು ಪೀಠದಲ್ಲಿ ಉಪಸ್ಥಿತರಿದ್ದರು

1. ಪ್ರಶ್ನೋತ್ತರಗಳು

(ಅ) ತಡೆಹಿಡಿಯಲಾದ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು:

ಮದ್ದೂರು ತಾಲ್ಲೂಕು ಶಿವಪುರದ ಬಳಿ ಶಿಂಷಾ ನದಿಗೆ ಕಟ್ಟಿರುವ ಸೇತುವೆಗೆ ಸುಂಕ ವಸೂಲು ಮಾಡುತ್ತಿರುವುದು

14(314) ಶ್ರೀ **ಗುರುಸ್ವಾಮಿ** ಪಿ. (ಚಾಮರಾಜನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ತಾಲ್ಲೂಕು ಶಿವಪುರದ ಬಳಿ ಶಿಂಷಾ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆಗೆ (ರಾಜ್ಯ ಹೆದ್ದಾರಿ 17ರ ಸರಪಳಿ 78ನೇ ಕಿಮೀ ವ್ಯಾಪ್ತಿಯಲ್ಲಿ) ಇಲಾಖೆಯ ವತಿಯಿಂದ ರಸ್ತೆ ಸುಂಕವನ್ನು ವಾಹನಗಳಿಂದ ವಸೂಲಿ ಮಾಡಲು ಅನುಮತಿ ನೀಡಲಾಗಿದೆಯೇ;

ಆ) ನೀಡಲಾಗಿದ್ದರೆ ಎಂದಿನಿಂದ ನೀಡಿದೆ; ಯಾವ ಸಂಸ್ಥೆಗೆ ನೀಡಿದೆ, ಅಥವಾ ಇಲಾಖೆಯೇ ಸುಂಕ ವಸೂಲಿ ವ್ಯವಹಾರ ನಡೆಸುತ್ತಿದೆಯೇ; ಇದಕ್ಕೆ ಕಾರಣವೇನು;

ಇ) ಈ ವಹಿವಾಟಿನ ಗುತ್ತಿಗೆಯನ್ನು ಟೆಂಡರ್ ಮೂಲಕ ನೀಡಲಾಗಿದೆಯೇ ಎಷ್ಟು ಮೊತ್ತಕ್ಕೆ ಗುತ್ತಿಗೆ ವಹಿಸಲಾಗಿದೆ ಹಾಗೂ ವಸೂಲಿ ಮಾಡುವ ಸುಂಕದ ಶುಲ್ಕ ಎಷ್ಟು ಯಾವ ಯಾವ ವಾಹನಕ್ಕೆ ಎಷ್ಟು ನಿಗಧಿಗೊಳಿಸಲಾಗಿದೆ; ವಿವರ ನೀಡುವುದು?

ಶ್ರೀ **ಧರ್ಮಸಿಂಗ್** (ಲೋಕೋಪಯೋಗಿ ಸಚಿವರು):

ಅ) ಹೌದು. ಖಾಸಗಿ ಸಂಸ್ಥೆಯವರಿಗೆ ಗುತ್ತಿಗೆಯ ಆಧಾರದ ಮೇಲೆ ಸುಂಕ ವಸೂಲು ಮಾಡಲು ಅನುಮತಿ ನೀಡಲಾಗಿರುತ್ತದೆ.

ಆ) ಈ ಗುತ್ತಿಗೆಯನ್ನು ಟೆಂಡರ್ ಆಧಾರದ ಮೇಲೆ ಶ್ರೀ ಎಂ. ರಾಮಕೃಷ್ಣ, ಒಂದನೇ ದರ್ಜೆ ಗುತ್ತಿಗೆದಾರರು, ಶ್ರೀರಂಗಪಟ್ಟಣ ಇವರಿಗೆ ದಿನಾಂಕ 23-6-2000 ದಿಂದ 22-4-2001 ರವರೆಗೆ ನೀಡಲಾಗಿರುತ್ತದೆ.

ಇ) ಹೌದು. ಈ ಟೆಂಡರ್ ರೂ. 1,26,00,786-00 ಗಳಿಗೆ ಗುತ್ತಿಗೆ ಪಹಿಸಲಾಗಿದೆ.

ಈ ಸೇತುವೆಯ ಮೇಲೆ ಓಡಾಡುವ ವಾಹನಗಳಿಂದ ಪ್ರತಿ ದಿನ ಸಂಗ್ರಹಿಸಲಾಗುತ್ತಿರುವ ಟೋಲ್ ಹಣ ವಿವಿಧ ವಾಹನಗಳಿಗೆ ಈ ಕೆಳಕಂಡಂತೆ ಇರುತ್ತದೆ.

1) ಮೋಟಾರು ಸೈಕಲ್, ಸ್ಕೂಟರ್ ಮತ್ತು ಇತರ ದ್ವಿಚಕ್ರ ವಾಹನಗಳಿಗೆ	ಯಾವ ಶುಲ್ಕವೂ ಇಲ್ಲ
2) ಆಟೋರಿಕ್ಷಾ ಮತ್ತು ಮೂರು ಚಕ್ರದ ಇತರೆ ವಾಹನಗಳಿಗೆ	- ರೂ. 3-00
3) ಕಾರು, ಟ್ಯಾಕ್ಸಿ, ಜೀಪ್, ವ್ಯಾನ್ ಮತ್ತಿತರ ಲಘು ವಾಹನಗಳಿಗೆ	- ರೂ. 5-00
4) ಬಸ್ಸು, ಲಾರಿ ಮತ್ತು ಇತರೆ ಭಾರಿ ವಾಹನಗಳಿಗೆ:	
ಅ) ಭರ್ತಿ ಬಸ್ಸು ಲಾರಿಗಳಿಗೆ	- ರೂ. 15-00
ಆ) ಖಾಲಿ ಬಸ್ಸು ಮತ್ತು ಲಾರಿಗಳಿಗೆ	- ರೂ. 10-00
5) ಇತರ ಭಾರಿ ವಾಹನಗಳು ಡೋಜರ್ಸ್, ಅರ್ತ್‌ಮೂವರ್ಸ್	- ರೂ. 15-00

ಶ್ರೀ ಸಿ. ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ಮದ್ದೂರು ಹತ್ತಿರ ಶಿಂಷಾ ನದಿಗೆ ಅಡ್ಡಲಾಗಿ ಕಟ್ಟಿರತಕ್ಕಂಥ ಸೇತುವೆಗೆ ಸುಂಕ ವಸೂಲಾತಿಯ ಕಾರ್ಯಕ್ರಮ ದಿನದ 24 ಗಂಟೆಯೂ ನಡೆಯುತ್ತಿದೆಯೇ? ಅಥವಾ ಅದಕ್ಕೆ ಇಂತಿಷ್ಟು ಸಮಯ ಎಂದು ಮಾತ್ರ ನಿಗದಿ ಮಾಡಿದ್ದೀರಾ? ಅಲ್ಲಿ ಸುಂಕ ವಸೂಲು ಮಾಡತಕ್ಕಂಥ ಜನ ಯಾರು ಇದ್ದಾರೆ, ಅವರು ಬಹಳ ಅನುಚಿತವಾಗಿ ವರ್ತಿಸುವಂಥದ್ದನ್ನು ನಾವು ಗಮನಿಸಿದ್ದೇವೆ. ಆದ್ದರಿಂದ ಬಸ್ಸುಗಳಲ್ಲಿ, ಇತರ ವಾಹನಗಳಲ್ಲಿ ಬರತಕ್ಕಂಥ ಸಾರ್ವಜನಿಕರ ಜೊತೆ ತಾಳ್ಮೆಯಿಂದ, ಸೌಜನ್ಯದಿಂದ ವರ್ತಿಸುವುದಕ್ಕೆ ಅವರಿಗೆ ಸೂಚನೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಕೋಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಸುಂಕ ವಸೂಲಾತಿಗಾಗಿ ಗುತ್ತಿಗೆ ಕೊಡಲಾಗಿದೆ. ಗುತ್ತಿಗೆ ಕೊಟ್ಟ ಮೇಲೆ ಸುಂಕ ವಸೂಲು ಮಾಡುವ ಕಾರ್ಯಕ್ರಮವನ್ನು ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆವರೆಗೆ ಮಾಡುತ್ತಿದ್ದಾರೆ. ಆ ಗುತ್ತಿಗೆದಾರರು ಅಲ್ಲಿಗೆ ವಾಹನಗಳಲ್ಲಿ ಬರತಕ್ಕಂಥ ಜನರಿಗೆ ಸ್ವಲ್ಪ ತೊಂದರೆ ಕೊಡುತ್ತಿದ್ದಾರೆ ಎನ್ನುವ ರೀತಿಯಲ್ಲಿ ಮಾನ್ಯ ಸದಸ್ಯರು ಹೇಳಿದ್ದಾರೆ. ತೊಂದರೆ ಕೊಡದ ರೀತಿಯಲ್ಲಿ ಸರ್ಕಾರದಿಂದ ನಿಯಂತ್ರಣ ಮಾಡುತ್ತೇವೆ.

ಶ್ರೀ ಸಿ. ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಸುಂಕವನ್ನು ವಸೂಲು ಮಾಡುತ್ತಾರೆಂದು ಮಾನ್ಯ ಸಚಿವರು ಹೇಳಿದರು. ಈ ರೀತಿಯಾದರೆ ಪರವಾಗಿಲ್ಲ. ಆದರೆ ರಾತ್ರಿ ಪೂರ್ತಿ ಅಲ್ಲಿ ಸುಂಕ ವಸೂಲು ಮಾಡುವುದು ನಡೆಯುತ್ತಿದೆ.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ 8 ಗಂಟೆಯಿಂದ ದಿನದ 24 ಗಂಟೆ ಕೂಡ ಅವರು ಸುಂಕ ಕಲೆಕ್ಟ್ ಮಾಡಬೇಕು.

ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಆ ಸೇತುವೆಯನ್ನು ಯಾವ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು ಕಟ್ಟಲಾಗಿದೆ. ಅಲ್ಲಿ ಸುಂಕ ವಸೂಲಿ ಮಾಡುವಂಥ ಜನರು, ರಾಕ್ಷಸರಂತೆ ಬಹಳ ವಿಚಿತ್ರವಾಗಿ ವರ್ತಿಸುತ್ತಿದ್ದಾರೆ. ಈ ಬಗ್ಗೆ ನಾನೂ ಕೂಡ ಪ್ರಶ್ನೆ ಕೇಳಿದ್ದೆ. ಚುಕ್ಕೆ ರಹಿತ ಪ್ರಶ್ನೆಯಾಗಿ ಮಾಡಿ ಆದಕ್ಕೆ ಸರ್ಕಾರದಿಂದ ಉತ್ತರವನ್ನು ಕೊಡಲಾಗಿದೆ. ಆದರೆ ಸೇತುವೆ ಬಳಿ ಅವರು ಮಾಡುತ್ತಿರುವ ಅಮಾನವೀಯ ವರ್ತನೆಯನ್ನು ಸರ್ಕಾರ ಕಣ್ಣಾರೆ ನೋಡಿ ಬುದ್ಧಿವಾದ ಹೇಳಬೇಕು. ಆ ಸೇತುವೆಗೆ ಎಷ್ಟು ಖರ್ಚು ಮಾಡಿದ್ದಾರೋ ಅಷ್ಟು ಹಣ ಈಗಾಗಲೇ ಬಂದುಬಿಟ್ಟಿದೆ ಎಂದು ತೋರುತ್ತದೆ. ಎರಡೂ ಕಡೆಯಿಂದ ಬರುವಂಥ ವಾಹನಗಳಿಂದ ದುಡ್ಡು ಕಲೆಕ್ಟ್ ಮಾಡುತ್ತಿದ್ದರು. ಈಗ ಒಂದು ಕಡೆಯಿಂದ ಮಾತ್ರ ಸುಂಕ ಕಲೆಕ್ಟ್ ಮಾಡುತ್ತಿದ್ದಾರೆ. ಸರ್ಕಾರದವರು ಅವರನ್ನು ಅಲ್ಲಿ ಯಮದೂತರಂತೆ ಕಾವಲು ಕಾಯಲು ಹಾಕಿದ್ದಾರೆ. ಸಾರ್ವಜನಿಕರು ಸರ್ಕಾರಿ ಮತ್ತು ತಮ್ಮ ತಮ್ಮ ಸ್ವಂತ ವಾಹನಗಳಲ್ಲಿ ಓಡಾಡುವಾಗ ಎಷ್ಟು ತೊಂದರೆಯಾಗುತ್ತಿದೆ ಎನ್ನುವುದನ್ನು ಸರ್ಕಾರ ಗಮನಿಸಿದೆಯೇ? ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಈಗ ನಾವು ಬಿ.ಓ.ಟಿ. ಯಲ್ಲಿ ಮಾಡತಕ್ಕಂಥ ಸೇತುವೆಗಳು ಮತ್ತು ರಸ್ತೆಗಳ ಮೇಲೆ ಸುಂಕ ವಸೂಲು ಮಾಡತಕ್ಕಂಥದ್ದು ಅಷ್ಟು ಸರಿಯಿಲ್ಲ. ಏಕೆಂದರೆ ಅಂಥ ಕಡೆ ಸ್ವಲ್ಪ ಜನರಿಗೆ ತೊಂದರೆ ಮಾಡತಕ್ಕಂಥದ್ದು, ವಾಹನಗಳನ್ನು ನಿಲ್ಲಿಸಿ ಕಿರುಕುಳ ಕೊಡತಕ್ಕಂಥದ್ದು ಇದೆ. ನಾವು ಇತ್ತೀಚಿನ ದಿವಸಗಳಲ್ಲಿ ಬೇರೆ ಕಡೆಯಲ್ಲಿ ಕೂಡ ಟೋಲ್ ಕಲೆಕ್ಷನ್ ಮಾಡತಕ್ಕಂಥ ರೀತಿಯಲ್ಲಿ, ಸ್ವಲ್ಪ ಒಳ್ಳೆಯ ಸುಧಾರಣೆಯನ್ನು ಮಾಡುತ್ತಿದ್ದೇವೆ. ಈಗಾಗಲೇ ಟೆಂಡರ್ ಯಾರಿಗೆ ಕೊಟ್ಟಿದ್ದೇವೆ, ಆ ಟೆಂಡರ್ ಪೀರಿಯಡ್ ಕೂಡ ಮುಗಿಸುತ್ತಾ ಇದ್ದೇವೆ. ಟೋಲ್ ಕಲೆಕ್ಷನ್‌ನಲ್ಲಿ ಎಲ್ಲಿ ಈ ರೀತಿ ಜನರ ಮೇಲೆ ಬಹಳ ಕಿರುಕುಳ ಕೊಡತಕ್ಕಂಥ ಪದ್ಧತಿ ಇದೆ ಅದನ್ನು ನಿಲ್ಲಿಸುವುದಕ್ಕೆ, ಬೇರೆ ರೀತಿಯಲ್ಲಿ ಅದರ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತಿದೆ.

ಶ್ರೀ ಹೆಚ್.ಸಿ. ಬಸವರಾಜು: ಮಾನ್ಯ ಅಧ್ಯಕ್ಷರೆ, ಇದುವರೆಗೆ ಈ ಸೇತುವೆಯಲ್ಲಿ ಎಷ್ಟು ಹಣ ಸುಂಕದ ರೂಪದಲ್ಲಿ ವಸೂಲಿ ಆಗಿದೆ ಮತ್ತು ಎಷ್ಟು ಖರ್ಚಾಗಿದೆ? ಈ ಸೇತುವೆ ನಿರ್ಮಾಣದ ಪಕ್ಕದಲ್ಲಿ ಸಾರ್ವಜನಿಕರ ಶೋಷಣೆ ಆಗುತ್ತಿರುವುದರಿಂದ, ಆ ಮಾರ್ಗವಾಗಿ ಓಡಾಡುವ ಬೇರೆ ಬೇರೆ ವಾಹನಗಳಿಗೆ ಸುಂಕದ ದರ ನಿಗದಿ ಮತ್ತು ಯಾವ ಯಾವ ವೇಳೆಗಳಲ್ಲಿ ಕಟ್ಟಬೇಕೆನ್ನುವ ಬಗ್ಗೆ ಅಲ್ಲಿ ಬೋರ್ಡ್‌ನ್ನು ಸರ್ಕಾರ ಹಾಕಿದೆಯೇ? ಹಾಕಿಲ್ಲದಿದ್ದಲ್ಲಿ ಅದನ್ನು ಹಾಕಿಸಲು ಕ್ರಮ ಕೈಗೊಳ್ಳಬೇಕು.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಆ ಸೇತುವೆ ನಿರ್ಮಾಣಕ್ಕೆ ಒಂದು ಕೋಟಿ 50 ಲಕ್ಷ ರೂಪಾಯಿಗಳಷ್ಟು ಖರ್ಚಾಗಿದೆ. ಒಂದು ಕೋಟಿ 26 ಲಕ್ಷ ರೂಪಾಯಿಗೆ ಗುತ್ತಿಗೆ ಆಧಾರದ ಮೇಲೆ ಕೊಟ್ಟಿದ್ದೇವೆ. ಟೆಂಡರ್ ಕಾಲ್‌ಫರ್ ಮಾಡಿದ್ದೇವೆ, ಟೆಂಡರ್‌ದಾರರು ಪಾರ್ಟಿಸಿಪೇಟ್ ಮಾಡಿದ್ದಾರೆ. ಅದರಲ್ಲಿ ಯಾರು ಹೆಚ್ಚು ಕೋಟ್ ಮಾಡಿದ್ದಾರೆ ಅವರಿಗೆ ಕೊಟ್ಟಿದ್ದೇವೆ. ಯಾವ ಯಾವ ವಾಹನದ ಮೇಲೆ ಎಷ್ಟೆಷ್ಟು ಸುಂಕ ನಿಗದಿಪಡಿಸಲಾಗಿದೆ ಎನ್ನುವುದನ್ನು ಈಗಾಗಲೇ ಉತ್ತರದಲ್ಲಿ ಒದಗಿಸಿಕೊಟ್ಟಿದ್ದೇನೆ.

ಇನ್ನು ತಾವು ಜರಿಗೆ ಕಿರುಕುಳವಾಗುತ್ತಿರುವ ಬಗ್ಗೆ ತಿಳಿಸಿದ್ದೀರಿ. ಅಲ್ಲಿಗೆ ಬರುವ ಜನರು ಆ ರೀತಿ ಮಾಡಿದ್ದಾರೆ. ಆದರೂ ಸಹ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇದು ಮುಖ್ಯಮಂತ್ರಿಗಳ ಕ್ಷೇತ್ರವಾದ ಮದ್ದೂರಿನ ವಿಷಯ. ಇದರ ಬಗ್ಗೆ ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಹಳೆಯ ರಸ್ತೆ ಏನೇನೆ ಅದು ಚೆನ್ನಾಗಿದೆ. ಆದರೆ, ಟೋಲ್ ಕಲೆಕ್ಷನ್ ಮಾಡುವ ಒಂದೇ ಉದ್ದೇಶಕ್ಕಾಗಿ ಹಳೆಯ ರಸ್ತೆಯನ್ನು ಬಂದ್ ಮಾಡಿದ್ದಾರೆ. ಆ ಬ್ರಿಡ್ಜ್ ಸಹ ಚೆನ್ನಾಗಿದೆ. ಆದುದರಿಂದ, ಹಳೆಯ ರಸ್ತೆಯನ್ನು, ಓಪನ್ ಮಾಡಿಸಿ, ಜನರಿಗೆ ಓಡಾಡಲು ಅನುಕೂಲ ಮಾಡಿಕೊಡಿ. ಟೋಲ್ ಕಲೆಕ್ಷನ್ ಮಾಡುವವರಿಗೆ ಅನುಕೂಲ ಮಾಡಲು ಪ್ರಯಾಣಿಕರಿಗೆ ತೊಂದರೆ ಮಾಡುವುದು ಸರ್ಕಾರದ ನೀತಿಯಾಗಬಾರದು. ಅದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ? ಅಲ್ಲಿ ಮದ್ದೂರು ವಡೆ ತೆಗೆದುಕೊಳ್ಳದಿದ್ದರೆ, ಆ ಹುಡುಗರು ಕಾರನ್ನು ಗೀಚುತ್ತಾರೆ.

ಅಧ್ಯಕ್ಷರು: ಇದು ಮದ್ದೂರು ಬ್ರಿಡ್ಜ್ ವಿಷಯ. ಮದ್ದೂರು ವಡೆಗೂ, ಅದಕ್ಕೂ ಸಂಬಂಧವಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್: ಇವರಿಗೆ ಅಷ್ಟು ಅನಾನುಕೂಲವಾಗುವುದಾದರೆ, ಮದ್ದೂರು ವಡೆ ತಿನ್ನಲು ಆ ಜಾಗಕ್ಕೇಕೆ ಹೋಗಬೇಕು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ಮದ್ದೂರು ವಡೆ ತಿನ್ನಿಸುತ್ತಾರೆ. ನಮ್ಮ ಪರಿಸ್ಥಿತಿ ನೋಡಿ. ಟೋಲ್ ಕಲೆಕ್ಷನ್ ಮಾಡುವವರ ಪರವಾಗಿ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ.

ಶ್ರೀ ಧರ್ಮಸಿಂಗ್: ಇದಕ್ಕೆ ಖರ್ಚಾದದ್ದು ಒಂದು ಕೋಟಿ ಐವತ್ತು ಲಕ್ಷ ರೂಪಾಯಿಗಳು. ಬಾರ್ಡರ್ ಎಕನಾಮಿಕ್ ಇಂಪಾರ್ಟೆನ್ಸ್ ಅಡಿಯಲ್ಲಿ ಈ ಸೇತುವೆ ಕೆಲಸ ತೆಗೆದುಕೊಂಡಿದ್ದೇವೆ. ಇಂದು ಬಿ.ಓ.ಟಿ. ಮೇಲೆ ಯಾವುದಾದರೂ ಸೇತುವೆಯನ್ನು ಗುತ್ತಿಗೆ ಆಧಾರದ ಮೇಲೆ ಕೊಟ್ಟರೆ, ಅಲ್ಲಿಯೇ ಮತ್ತೊಂದು ರಸ್ತೆಯ ಮೇಲೆ ಓಡಾಡಲು ಅನುಕೂಲ ಮಾಡಿದರೆ ಯಾರೂ ಸಹ ಬಿ.ಓ.ಟಿ. ಮೇಲೆ ಕೆಲಸ ಮಾಡಲು ಬರುವುದಿಲ್ಲ. ಹುಬ್ಬಳ್ಳಿ ಬೈಪಾಸ್ ರಸ್ತೆಯನ್ನು ನಾವೇನು ಬಿ.ಓ.ಟಿ ಆಧಾರದ ಮೇಲೆ ಮಾಡಿದ್ದೇವೆ, ಅಲ್ಲಿ ಅವರು ನಾವು ಹಳೆಯ ರಸ್ತೆಯ ಮೇಲೆ ಓಡಾಡುತ್ತೇವೆ ಎಂದು ಕೆಲಸ ನಿಲ್ಲಿಸಿದ್ದಾರೆ. ಬೇರೆ ರಸ್ತೆ ಬಂದ್ ಮಾಡದಿದ್ದರೆ ಅವರಿಗೆ ಟೋಲ್ ಕಲೆಕ್ಷನ್ ಆಗುವುದಿಲ್ಲ. ಇಂದು ಯಾರ್ಯಾರು ಬಿ.ಓ.ಟಿ. ಬೇಸಿನ್ ಮೇಲೆ ಕೆಲಸ ಮಾಡುತ್ತಾರೆ, ಅವರಿಗೆ ಸರ್ಕಾರ ಹಣ ಕೊಡಬೇಕಾಗುತ್ತದೆ. ಟೆಂಡರ್ ಕಾಲ್‌ಫರ್ ಮಾಡಿ ಅದನ್ನು ಕೊಟ್ಟಿದ್ದು, ಅದರಲ್ಲೇನೂ ಅಪಾರಾತಪರಾ ಇಲ್ಲ. ಹಳೆಯ ರಸ್ತೆಯನ್ನು ಎರಡು ತಿಂಗಳ ನಂತರ ಪ್ರಾರಂಭಿಸುತ್ತೇವೆ. ಅಷ್ಟರಲ್ಲಿ ಟೋಲ್ ಕಲೆಕ್ಷನ್ ಮುಗಿಯುತ್ತದೆ. ಆನಂತರ, ಜನರು ಬ್ರಿಡ್ಜ್ ಮೇಲೂ ಸಹ ಓಡಾಡಬಹುದು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಗಣಿಕೈಗಾರಿಕೆ

45 (505) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?